ಓ. ಎಸ್ . 138/2020 ಪಿ.ಡಬ್ಲ್ಯೂ - 2 ಪರಪ್ಪ ಚೌಗಲಾ

**(ದಿನಾಂಕಃ 22-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು)**

**ವಾಟಿ ಸವಾಲು : ಪ್ರತಿವಾದಿ ಪರ ಶ್ರೀ ಎ ಎಮ್ ಎಚ್ ವಕೀಲರಿಂದ -**

ಕಾಡಪ್ಪ ಪರಪ್ಪ ಚೌಗಲಾ ಹಾಗೂ ಅಜಿತಕುಮಾರ ಚೌಗಲಾ ಇವರು ನನಗೆ ಕಾಕಾ ಆಗಬೇಕು. ಪರಪ್ಪ ರಾಮಪ್ಪ ಚೌಗಲಾ ಇವರು ನನಗೆ ದೂರದ ಸಂಬಂಧಿಕರಾಗಬೇಕು. ಬಾಹುಬಲಿ ಕಾಡಪ್ಪನ ಮಗ . ಬಾಹುಬಲಿ ಈಗ ತೀರಿಕೊಂಡಿರುತ್ತಾರೆ. ಬಾಹುಬಲಿ ಈತನನ್ನು 2ನೇ ವಾದಿ ಅಜಿತಕುಮಾರ ಕಾಡಪ್ಪ ಚೌಗಲಾ ಇವರು ಕೊಲೆ ಮಾಡಿದ್ದಾನೆ ಎಂದು ಗೋಕಾಕ ನ್ಯಾಯಾಲಯದಲ್ಲಿ ಕೇಸ ದಾಖಲ ಆಗಿತ್ತು, ಆತ 2 ವರ್ಷ ಜೈಲಿನಲ್ಲಿದ್ದ ಎಂದರೆ ನಿಜ. ಬಾಹುಬಲಿ ಮತ್ತು ಅಜಿತ ಖಾಸ ಅಣ್ಣತಮ್ಮಂದಿರರು . ಬಾಹುಬಲಿ ತಾನು ಬದುಕಿದ್ದಾಗ 1ನೇ ಪ್ರತಿವಾದಿ ಪರ ದಾವಾಸ್ತಿಯಲ್ಲಿ ರಸ್ತೆ ಇಲ್ಲ ಎಂದು ಪ್ರಮಾಣ ಪತ್ರ ಹಾಕಿದ್ದ ಎಂದರೆ ನಿಜ. ಆ ಕಾರಣದಿಂದ ಅಜಿತಕುಮಾರು ಆತನ ಮೇಲೆ ಜಗಳ ತೆಗೆದು ಆತನನ್ನು ಕೊಲೆ ಮಾಡಿದ್ದ ಎಂದರೆ ನಿಜ.

2. ನನಗೆ ದಾವಾ ಆಸ್ತಿ ಸರ್ವೆ ನಂಬರ ನೆನಪಿಲ್ಲ. 1ನೇ ವಾದಿ ಮತ್ತು 1 ಪ್ರತಿವಾದಿ ಜಮೀನು ಖರೀದಿ ಮಾಡುವ ವ್ಯವಹಾರದಲ್ಲಿ ನಾನು ಭಾಗಿಯಾಗಿರುವುದಿಲ್ಲ. ಆ ಖರೀದಿ ಪತ್ರದಲ್ಲಿ ಏನು ಬರೆದಿದೆ ಎಂಬ ವಿಚಾರ ನನಗೆ ಗೊತ್ತಿಲ್ಲ ಎಂದರೆ ನಿಜ. ಖರೀದಿ ಪತ್ರದಲ್ಲಿ 12 ಫೂಟು ರಸ್ತೆ ಎಂಬ ಬಗ್ಗೆ ಬರೆದಿಲ್ಲ ಎಂದರೆ ಸಾಕ್ಷಿ ನಾನು ಆ ಕಾಗದ ಪತ್ರ ನೋಡಿಲ್ಲ ಎಂದು ಹೇಳುತ್ತಾರೆ. ಆ ಜಮೀನಿನಲ್ಲಿ ಪೂಶವ ಭಾಗದಲ್ಲಿ ಯಾವತ್ತೂ 12 ಫೂಟು ರಸ್ತೆ ಇಲ್ಲ ಎಂದರೆ ಸರಿಯಲ್ಲ. ಶಿವಲಿಂಗ ಇವರ ಜಮೀನಿಗೆ ಹೊಂದಿಕೊಂಡು ಉತ್ತರ ಭಾಗಕ್ಕೆ ಕಾಡಪ್ಪನ ಜಮೀನು ಇದೆ. ಶಿವಲಿಂಗನ ಉತ್ತರಕ್ಕೆ 2ನೇ ಪ್ರತಿವಾದಿ ಮಹಾವೀರ ಕಾಡಪ್ಪ ಚೌಗಲಾ ಇವರ ಜಮೀನು ಬರುತ್ತದೆ. ಮಹಾವೀರ ಚೌಗಲಾ ಇವರ ಉತ್ತರಕ್ಕೆ ಕಾಡಪ್ಪನ ಜಮೀನು ಬರುತ್ತದೆ. ಶಿವಲಿಂಗ ಹಾಗೂ ಮಹಾವೀರ ಇವರ ಜಮೀನಿನ ಪಶ್ಚಿಮ ಭಾಗಕ್ಕೆ ನಮ್ಮ ಜಮೀನು 446 ಬರುತ್ತದೆ. ಸರ್ವೆ ನಂ. 446 ರಲ್ಲಿ ನಾವು 4 ಜನ ಇದ್ದೇವೆ , ಅವರು 1) ಮಹಾವೀರ 2) ಜಿನ್ನಪ್ಪ 3) ಬಾಬು 4) ಪರಪ್ಪ. ನಾವು ಪೂರ್ವ ಪಶ್ಚಿಮವಾಗಿ ಪಾಲು ಮಾಡಿಕೊಂಡಿರುತ್ತೇವೆ. ನಮ್ಮ ಜಮಿನುಗಳಲ್ಲಿ ಗುಡಸ ರಸ್ತೆಗೆ ಹತ್ತಿಕೊಂಡು ಮೊದಲನೆ ಪಟ್ಟಿ ಮಹಾವೀರನದು ಬರುತ್ತದೆ , ಮಹಾವೀರನ ಉತ್ತರಕ್ಕೆ ಜಿನ್ನಪ್ಪನ ಜಮೀನು , ಜಿನ್ನಪ್ಪನ ಉತ್ತರಕ್ಕೆ ಬಾಬು

, ಬಾಬುನ ಉತ್ತರಕ್ಕೆ ಪರಪ್ಪ ಇವರ ಜಮೀನು ಬರುತ್ತದೆ. ನಮ್ಮ ಜಮೀನು ದಾಟಿ ಉತ್ತರಕ್ಕೆ ಸರ್ವೆ ನಂ. 446 ರಲ್ಲಿಯೇ ಪಾಯಪ್ಪ ಪರಪ್ಪ ಚೌಗಲಾ ಇವರ ಜಮೀನು ಬರುತ್ತದೆ. ಆ ಕಾಡಪ್ಪನ ಜಮೀನಿನ ವರೆಗೆ ಸರ್ವೆ ನಂ. 446 ರ ಜಮೀನು ಬರುತ್ತದೆ. ನನಗೆ ಸರಿಯಾಗಿ ಕಣ್ಣು ಕಾಣುವುದಿಲ್ಲ , ಮಂಜು ಮಂಜು ಕಾಣುತ್ತದೆ. ನಾನು ಈಗ ಫೋಟೋಗಳನ್ನು ನೋಡುತ್ತಿದ್ದೇನೆ ಅವುಗಳು ನನಗೆ ಸರಿಯಾಗಿ ಕಾಣುತ್ತಿಲ್ಲ.

3. ನಾನು ಸಾಕ್ಷಿ ಹೇಳುವ ಮೊದಲು ಅಜಿತಕುಮಾರ ನನಗೆ ಹೊಲದ ಫೋಟೊ ತೆಗೆದು ತೋರಿಸಿಲ್ಲ. ನಮ್ಮ ಜಮೀನಿನ ಪೂರ್ವ ಬಾಜು ಹಾಗೂ ಶಿವಲಿಂಗ ಮಾಸ್ತರ ಇವರ ಪಶ್ಚಿಮ ಬಾಜು ಒಂದು ಹಾದಿ ಇದೆ ಎಂದರೆ ಸರಿಯಲ್ಲ . ನಮ್ಮ ಜಮೀನುಗಳಿಗೆ ಹೋಗಲು ನಾವು ಪಂಚಾಯತಿಯಿಂದ ನಮ್ಮ ಜಮೀಲನಿನ ಕೆಳಗಡೆ ಪೂರ್ವ ಬಾಜು ರೋಡ ಮಾಡಿಕೊಂಡಿದ್ದೇವೆ. ಅದು 10-12 ಫೂಟು ಅಗಲ ಇದೆ ಎಂದರೆ ನಿಜ. ನಾವು 4 ಜನ ಅಂದರೆ 1) ಮಹಾವೀರ 2) ಜಿನ್ನಪ್ಪ 3) ಬಾಬು 4) ಪರಪ್ಪ ಅದೇ ಹಾದಿ ಮೂಲಕ ಕಬ್ಬನ್ನು ಸಾಗಿಸುತ್ತೇವೆ ಎಂದರೆ ನಿಜ. ಮೊದಲಿನಿಂದಲೂ ಕಾಡಪ್ಪ ಮತ್ತು ಮಹಾವೀರ ಇವರು ತಮ್ಮ ಜಮೀನಿನಲ್ಲಿ ಬೆಳದ ಕಬ್ಬನ್ನು ಅದೇ ಹಾದಿ ಮೂಲಕ ಸಾಗಿಸುತ್ತಾರೆ ಎಂರೆ ಸರಿಯಲ್ಲ.

4. ವಾದಿಯರು ಮತ್ತು ಪ್ರತಿವಾದಿ ನಂ. 2 ಇವರು ಪ್ರತಿವಾದಿ ನಂ. 1 ಈತನ ಜಮೀನಿನ ಪೂರ್ವದಲ್ಲಿ ಹಾದಿ ಇಲ್ಲ ಎಂದರೆ ಸರಿಯಲ್ಲ. ಅವರು ನಮ್ಮ ಜಮೀನಿನ ಪಶ್ಚಿಮಕ್ಕೆ ಇರುವಂತಹ ಹಾದಿ ಮೂಲಕ ಹೋಗುತ್ತಾರೆ ಎಂದರೆ ಸರಿಯಲ್ಲ. ಶಿವಲಿಂಗ ಮಾಸ್ತರ ತಮ್ಮ ಜಮೀನಿನ ಪೂರ್ವ ಬಾಜುದಲ್ಲಿ ಒಡ್ಡು ಇದ್ದು ಆ ಒಡ್ಡಿನಲ್ಲಿ ಮಾವಿನ ಮರ ಹಚ್ಚಿ ದ್ದಾರೆ ಎಂದರೆ ನಿಜ. 1ನೇ ಪ್ರತಿವಾದಿ ಜಮೀನಿನ ಪೂರ್ವ ಬಾಜುದಲ್ಲಿ ಒಡ್ಡು ಇದ್ದು ಆ ಒಡ್ಡಿನ ತನಕ ಬೆಳೆ ಸಾಗು ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ಈಗ 4 ವರ್ಷದಿಂದ ಆ ಒಡ್ಡಿನ ತನಕ ಸಾಗು ಮಾಡುತ್ತಿದ್ದಾರೆ , ಮುಂಚೆ ಅದು ರಸ್ತೆ ಇತ್ತು ಎಂದು ಹೇಳುತ್ತಾರೆ. ಅಲ್ಲಿ ಯಾವತ್ತೂ ರಸ್ತೆ ಇರಲಿಲ್ಲ ಎಂದರೆ ಸರಿಯಲ್ಲ . ನಮ್ಮ ಜಮೀನಿನಲ್ಲಿರುವ ರಸ್ತೆ ಅಥವಾ ವಾದಿಯರು ಮತ್ತು 1ನೇ ಪ್ರತಿವಾದಿಯ ಜಮೀನಿನಲ್ಲಿ ಸರಕಾರಿ ರಸ್ತೆ ಇರುವ ಬಗ್ಗೆ ನಮೂದು ಇರುವುದಿಲ್ಲ.

5. ವಾದಿಯರು ಪ್ರತಿವಾದಿಯರ ವಿರುದ್ಧ ದಾಂಡಗಾನತನದಿಂದ ಕೇಸ ಹಾಕಿದ್ದಾರೆ ಅಲ್ಲಿ ಯಾವುದೇ ರಸ್ತೆ ಇಲ್ಲ ಎಂದರೆ ಸರಿಯಲ್ಲ. ವಾದಿಯರಿಗೆ ದಾವಾ ರಸ್ತೆ ಬಿಟ್ಟು ಬೇರೆ ರಸ್ತೆ ಇಲ್ಲ ಎಂದು ಸುಳ್ಳು ಬರೆಸಿದ್ದೇವೆ ಎಂದರೆ ಸರಿಯಲ್ಲ. ವಾದಿಯರು ನಮ್ಮ ಜಮೀನಿನ ಪೂರ್ವ ಭಾಗದಲ್ಲಿರುವ ರಸ್ತೆ ಮೂಲಕ ವಹಿವಾಟು ಮಾಡುತ್ತಿರುವುದು ಗೊತ್ತಿದ್ದರೂ ಸಹ ನಾನು ಅಲ್ಲಿ ವಾದಿಯರು ವಹಿವಾಟು ಮಾಡುತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರ ಸರಿಯಲ್ಲ. ನಾನು 1ನೇ ಪ್ರತಿವಾದಿಗೆ ತೊಂದರೆ ಕೊಡಬೇಕೆಂದು ವಾದಿಯರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರ ಸರಿಯಲ್ಲ. ನನಗೆ ದೃಷ್ಟಿ ಚೆನ್ನಾಗಿದ್ದರೂ ಸಹ ದಾವೆಯಲ್ಲಿ ಸಲ್ಲಿಸಿದ ಫೋಟೊಗಳಲ್ಲಿರುವ ಹಾದಿ ಗುರುತು ಹಿಡಿಯಬೇಕಾಗುತ್ತದೆ ಎಂದು ನಾನು ಮುದ್ದಾಂ ಕಣ್ಣು ಕಾಣುತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

(ಆದಿತ್ಯ ಆರ್. ಕಲಾಲ್)
**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**